ಸಾಕ್ಷಿಯನ್ನು ದಿಃ**16.10.2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಬಿ.ಟಿ.ಆರ್. ವಕೀಲರಿಂದ:

ವಾದಿಗೆ ಕೆಲಸದ ಒತ್ತಡ ಹಾಗೂ ಅನಾರೋಗ್ಯವಿರುವ ಕಾರಣ ನನಗೆ ಅಧಿಕಾರ ಪತ್ರವನ್ನು ನೀಡಿರುತ್ತಾರೆ. ಸದರಿ ವಿಚಾರಗಳನ್ನು ನಿಪಿ.1 ರಲ್ಲಿ ನಮೂದು ಮಾಡಲಾಗಿದೆ. ಈ ದಾವೆಯನ್ನು ಸರ್ವೇ ನಂ.29 ರಲ್ಲಿ 15 ಗುಂಟೆ ಬೀರಗಾನಹಳ್ಳಿ ಕುರಿತು ಹೂಡಲಾಗಿದೆ. ಸದರಿ ಆಸ್ತಿಯ ಚೆಕ್ಕು ಬಂದಿ ಪೂರ್ವಕ್ಕೆಃ ನಮ್ಮದೇ ಆಸ್ತಿ, ಪಶ್ಚಿಮಕ್ಕೆಃ ಕುಣಿಗಲ್-ಮದ್ದೂರು ರಸ್ತೆ, ಉತ್ತರಕ್ಕೆಃ ಮೊದಲು ಭದ್ರಯ್ಯನ ಜಮೀನಾಗಿದ್ದು ಈಗ ನಮ್ಮ ಸ್ವಾಧೀನಾನುಭವದಲ್ಲಿರುವ ಆಸ್ತಿಯಾಗಿದೆ ಮತ್ತು ದಕ್ಷಿಣಕ್ಕೆಃ ನಮ್ಮದೇ ಆಸ್ತಿ. ಪೂರ್ವಕ್ಕಿರುವ ಆಸ್ತಿಯನ್ನು ನಮ್ಮ ತಂದೆ ಕೊಂಡುಕೊಂಡ ಸರ್ವೇ ನಂ.29 ಆಗಿರುತ್ತದೆ. ಸದರಿ ಆಸ್ತಿಯನ್ನು ನಮ್ಮ ತಂದೆ ಯಾರಿಂದ ಕೊಂಡು ಕೊಂಡಿದ್ದು ಎಂದು ನನಗೆ ಗೊತ್ತಿಲ್ಲ. ಭದ್ರಯ್ಯನವರಿಂದ ನನ್ನ ತಂದೆ 2020-21 ರಲ್ಲಿ ಕ್ರಯಕ್ಕೆ ಪಡೆದಿದ್ದು, ನಾವು ಸ್ವಾಧೀನಾನುಭವದಲ್ಲಿದ್ದೇವೆ. ಸದರಿ ಆಸ್ತಿಯ ಸರ್ವೇ ನಂ.29 ಹಾಗೂ ವಿಸ್ತೀರ್ಣ 21 ಗುಂಟೆ ಆಗಿರುತ್ತದೆ. ನಾರಾಯಣಾಚಾರ್ ರವರ ಆಸ್ತಿಯನ್ನು ಭದ್ರಯ್ಯರವರು ಕೊಂಡುಕೊಂಡಿದ್ದರು. ನಾರಾಯಣಾಚಾರ್ ರವರಿಗೆ ದಾವಾ ಆಸ್ತಿಯ ಉತ್ತರಕ್ಕೆ 21 ಗುಂಟೆ ಜಮೀನು ಇರಲಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ದಕ್ಷಿಣಕ್ಕಿರುವ ನಮ್ಮ ಆಸ್ತಿಯನ್ನು ನಾರಾಯಣಾಚಾರ್ ರವರಿಂದ 1991 ರಲ್ಲಿ ಸರ್ವೇ ನಂ.29 ರಲ್ಲಿ 17 ಗುಂಟೆಯನ್ನು ಖರೀದಿ ಮಾಡಿರುತ್ತೇವೆ. ಮೂಲತಃ ಸರ್ವೇ ನಂ.29 ಎಷ್ಟು ವಿಸ್ತೀರ್ಣ ಇತ್ತು ಎಂದು ನನಗೆ ಗೊತ್ತಿಲ್ಲ. ಸರ್ವೇ ನಂ.29 ರಲ್ಲಿ ನಾರಾಯಣಾಚಾರ್ ರವರಿಗೆ 21 ಗುಂಟೆ, 17 ಗುಂಟೆ ಮತ್ತು 15 ಗುಂಟೆ ಇತ್ತು. ಸದರಿ 3 ಜಮೀನುಗಳಿಗೂ ಒಂದೇ ಚೆಕ್ಕು ಬಂದಿ ಇತ್ತು. ದಾವಾ ಆಸ್ತಿಯನ್ನು ನಾರಾಯಣಾಚಾರ್ ರವರಿಂದ ಖರೀದಿ ಮಾಡಲಾಗಿದೆ. ನಾರಾಯಣಾಚಾರ್ ರವರಿಗೆ ಸದರಿ 3 ಆಸ್ತಿಗಳು ಅವರ ಪಿತ್ರಾರ್ಜಿತ ಆಸ್ತಿಯಾಗಿತ್ತು. ನಾರಾಯಣಾಚಾರ್ ರವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ನಾರಾಯಣಾಚಾರ್ ರವರ ತಂದೆಗೆ 4 ಜನ ಮಕ್ಕಳು. ನಾರಾಯಣಾಚಾರ್ ರವರ ತಂದೆಗೆ ಒಬ್ಬರೇ ಹೆಂಡತಿ ಇದ್ದರು. ನಾರಾಯಣಾಚಾರ್ ರವರ ಸಹೋದರರ ನಡುವೆ ಯಾರಿಗೆ ಎಷ್ಟು ಆಸ್ತಿ ಬಂದಿತ್ತು ಎಂದು ನನಗೆ ಗೊತ್ತಿಲ್ಲ.

ನಾರಾಯಣಾಚಾರ್ ರವರ ತಂದೆಯ ಹೆಸರು ವೆಂಕಟಾಚಾರಿ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ವೆಂಕಟಾಚಾರಿಯವರಿಗೆ ಪಾರ್ವತಮ್ಮ ಹಾಗೂ ಚಿಕ್ಕಮ್ಮ ಎಂಬ ಇಬ್ಬರೂ ಹೆಂಡತಿಯರು ಇದ್ದರು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಪಾರ್ವತಮ್ಮನವರಿಗೆ ತಿಮ್ಮಾಚಾರಿ ಮತ್ತು ವೆಂಕಟಾಚಾರಿ ಎಂಬ ಇಬ್ಬರು ಮಕ್ಕಳು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ

ಎಂದು ನುಡಿಯುತ್ತಾರೆ. ಚಿಕ್ಕಮ್ಮನವರಿಗೆ ವರದಾಚಾರಿ, ಗೋವಿಂದಾಚಾರಿ, ನಾರಾಯಣಾಚಾರಿ, ಹೊನ್ನಪ್ಪಚಾರಿ, ಲಕ್ಷ್ಮಣಾಚಾರಿ ಎಂಬ ಮಕ್ಕಳಿದ್ದರು ಎಂದರೆ ಸಾಕ್ಷಿಯು ತನಗೆ 4 ಜನ ಮಕ್ಕಳ ವಿಚಾರ ಗೊತ್ತು ಎಂದು ನುಡಿಯುತ್ತಾರೆ.

ವೆಂಕಟಾಚಾರಿ ತಾವು ಜೀವಿತವಿದ್ದಾಗ ದಿನಾಂಕಃ12.08.1963 ರಲ್ಲಿ ತಮ್ಮ ಇಬ್ಬರೂ ಹೆಂಡತಿಯ ಮಕ್ಕಳಿಗೆ ಆಸ್ತಿಗಳನ್ನು ವಿಭಾಗ ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಭಾಗದಂತೆ ಸರ್ವೇ ನಂ.29 ರಲ್ಲಿ 17 ಗುಂಟೆ ಜಮೀನನ್ನು ವೆಂಕಟಾಚಾರಿ ತಾವೇ ಉಳಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಸರ್ವೇ ನಂ.29 ರಲ್ಲಿ 1 ಎಕರೆ 8 ಗುಂಟೆ ಜಮೀನನ್ನು ಮೊದಲನೇ ಹೆಂಡತಿ ಮಕ್ಕಳಿಗೆ ವೆಂಕಟಾಚಾರಿ ನೀಡಿದ್ದರು ಎಂದರೆ ಸರಿಯಲ್ಲ. ಸರ್ವೇ ನಂ.29 ರಲ್ಲಿ 1 ಎಕರೆ 35 ಗುಂಟೆ ಜಮೀನನ್ನು ಎರಡನೇ ಹೆಂಡತಿ ಮಕ್ಕಳಿಗೆ ವೆಂಕಟಾಚಾರಿ ನೀಡಿದ್ದರು ಎಂದರೆ ಸರಿಯಲ್ಲ. ನಾರಾಯಣಾಚಾರಿಯವರಿಗೆ ಕೇವಲ 15 ಗುಂಟೆ ಜಮೀನು ಬಂದಿತ್ತು ಎಂದರೆ ಸರಿಯಲ್ಲ. ಸರ್ವೇ ನಂ.29 ರಲ್ಲಿ ನಾರಾಯಣಾಚಾರ್ ರವರಿಗೆ 21 ಗುಂಟೆ, 17 ಗುಂಟೆ ಮತ್ತು 15 ಗುಂಟೆ ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ.

ದಾವಾ ಆಸ್ತಿಯ ಉತ್ತರ–ದಕ್ಷಿಣಕ್ಕೆ ನಾರಾಯಣಾಚಾರ್ ರವರಿಗೆ ಜಮೀನು ಇರಲಿಲ್ಲ ಎಂದರೆ ಸಾಕ್ಷಿಯು ತನ್ನ ತಂದೆ ದಕ್ಷಿಣಕ್ಕೆ ಬೇರೆಯವರಿಂದ ಕೊಂಡ ಸ್ವಂತ

ಜಮೀನು ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ದಕ್ಷಿಣಕ್ಕೆ ಇರುವ ಆಸ್ತಿ ನಾರಾಯಣಾಚಾರ್ ರವರ ತಂದೆಗೆ ಸೇರಿದ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ಭದ್ರಯ್ಯ ರವರಿಂದ ಖರೀದಿ ಮಾಡಿದ ಆಸ್ತಿ ಅವರಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಉತ್ತರಕ್ಕೆ ಇರುವ 15 ಗುಂಟೆ ಜಮೀನು ಗೋವಿಂದಾಚಾರಿಗೆ ವಿಭಾಗದಲ್ಲಿ ಬಂದಿದ್ದು ಅವರಿಗೆ ಭದ್ರಯ್ಯನಿಗೆ 21 ಗುಂಟೆ ಮಾರಾಟ ಮಾಡಲು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆಯ 6 ಗುಂಟೆ ಆಸ್ತಿಯನ್ನು ಸೇರಿಸಿ ಭದ್ರಯ್ಯರವರಿಂದ ಖರೀದಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಕಾರಣದಿಂದ ಪ್ರತಿವಾದಿ ಹಾಗೂ ಅವರ ಕುಟುಂಬದವರು ಅಸಲು ದಾವಾ ಸಂಖ್ಯೆ:73/2020 ರಲ್ಲಿ ಸರ್ವೇ ನಂ.29 ಕ್ಕೆ ಹೂಡಿದ್ದು ಅದರಲ್ಲಿ ನಾವು ಹಾಜರಾಗಿರುತ್ತೇವೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.